
ತನ್ನ ಮಗ ಶ್ವೇತಕೇತುವಿಗೆ ಮುನಿ ಉದ್ದಾಲಕ ಉಪದೇಶ ಮಾಡುತ್ತಿದ್ದಾನೆ. ಒಂದು ರಾತ್ರಿ
ಮಗು ಈ ಉಪ್ಪನ್ನು ನೀರಿನಲ್ಲಿ ಹಾಕಿ ಬೆಳಗ್ಗೆ ನನ್ನ ಬಳಿಗೆ ಬಾ
ಆಯಿತು, ಭಗವನ್
ಮಗು, ನೆನ್ನೆ ನೀನು ನೀರಿನಲ್ಲಿ ಹಾಕಿದ ಉಪ್ಪನ್ನು ತೆಗೆದುಕೊಂಡು ಬಾ
ಅದು ಕಾಣುತ್ತಲೇ ಇಲ್ಲವಲ್ಲ
ಮಗು, ನೀರಿನ ಮೇಲ್ಭಾಗ ಕುಡಿದು ನೋಡು, ಹೇಗಿದೆ
ಭಗವನ್ ಉಪ್ಪಾಗಿದೆ.
ಮಗು, ನೀರಿನ ಮಧ್ಯಭಾಗ ಮತ್ತು ಕೆಳಭಾಗ ಕುಡಿದು ನೋಡು, ಹೇಗಿದೆ
ಭಗವನ್, ಉಪ್ಪಾಗಿದೆ. ರಾತ್ರಿ ಹಾಕಿದ ಉಪ್ಪು ನೀರಿನಲ್ಲಿಯೆ ಇದೆ.
ಮಗು, ಆ ಉಪ್ಪು ನೀರಿನಲ್ಲಿಯೆ ಇದ್ದರೂ ನೀನು ಅದನ್ನು ನೋಡಲಿಲ್ಲ. ಹೀಗೆಯೆ ಭಗವಂತನೂ ಕೂಡ. ಅವನು ನಮ್ಮ ಶರೀರದಲ್ಲಿಯೆ ಸೂಕ್ಷ್ಮರೂಪದಲ್ಲಿ ಇದ್ದಾನೆ. ಅವನೇ ಈ ಜಗತ್ತಿನ ಮೂಲ. ಅವನಿಂದಲೇ ಈ ಜಗತ್ತೆಲ್ಲವೂ ತುಂಬಿ ಹೋಗಿದೆ. ಅವನೇ ಸತ್ಯ. ಆ ಪರಮ ತತ್ತ್ವವೇ ನಿನ್ನ ಆತ್ಮವೂ ಆಗಿದೆ. ಓ ಶ್ವೇತಕೇತು, ತತ್ತ್ವಮಸಿ, ಅದೇ ನೀನೂ ಆಗಿರುವೆ. ಆ ಪರಮಾತ್ಮನೇ ನೀನೂ ಆಗಿರುವೆ.
ಚಿತ್ರ : ರಾಮಗೌತಮ
ತತ್ತ್ವಮಸಿ